ಓಂ ಶ್ರೀ ಗಣೇಶಾಯನಮ: ಶ್ರೀ ವಾಗ್ದೇವ್ಯೈನಮ: ಮಾತೃಭ್ಯೋನಮ: ಪಿತೃಭ್ಯೋನಮ: ಶ್ರೀ ಗುರುಭ್ಯೋನಮ: ಪರಮ ಗುರುಭ್ಯೋ ನಮ: ಓಂ ಶ್ರೀ ಲೋಕಾಂಬಾ ಚೆಂಚುಲಕ್ಷ್ಮಿ ಸಮೇತ ಸಾಲಿಗ್ರಾಮ ರೂಪ ಶ್ರೀನರಸಿಂಹಸ್ವಾಮಿನೇ ನಮ: ಶ್ರೀ ಪಾರ್ವತಾಂಬಾ ಸಮೇತ ಶ್ರೀ ನಂಜುಂಡೇಶ್ವರ ಸ್ವಾಮಿನೇ ನಮ: ಹರಿ: ಓಂ ಶ್ರೀ ಬಿಂದುಮಾಧವ ಗುರು ಶ್ರೀ ಪುರಂದರ ದಾಸ ಗುರುದೇವತಾಭ್ಯೋನಮ:

# ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ

## (ದಾಸ ಶ್ರೇಷ್ಠ ಶ್ರೀ ಪುರಂದರ ದಾಸರ ಅದ್ಭುತವಾದ ಮುಂಡಿಗೆ)

ಶ್ರೀ ಪುರಂದರದಾಸರು ಈ ದಿವ್ಯ ಕೀರ್ತನೆಯಲ್ಲಿ ಅಂದರೆ ಈ ಮುಂಡಿಗೆಯಲ್ಲಿ ಮಾನವ ಜನ್ಮದ ಮೋಕ್ಷಪ್ರಾಪ್ತಿಯ ಮಾರ್ಗವನ್ನು, ನಮ್ಮ ಉದ್ಧಾರ ಮಾರ್ಗವನ್ನು ಹೇಳುತ್ತಾರೆ. ಚಿಕ್ಕವಯಸ್ಸಿನಲ್ಲಿಯೇ ಸತ್ಸಂಗ, ಸದ್ವಿಚಾರದಿಂದ ಅನುಗ್ರಹ ಪಡೆಯಬೇಕೆಂದು ದಾಸರು ಇಡೀ ಮಾನವ ವರ್ಗಕ್ಕೆ ಉಪದೇಶ ಮಾಡಿದ್ದಾರೆ. ದಾಸರ ಕೃತಿಗಳು ವೇದ ವೇದಾಂತದ, ಉಪನಿಷತ್ತಿನ ಸಾರ. ದಾಸರು ಅಪ್ಪಣೆ ಕೊಡಿಸ್ತಾರೆ.

ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ । ಎರಡು ತುಂಬದು ಒಂದು ತುಂಬಲೇ ಇಲ್ಲ ।
ತುಂಬಲಿಲ್ಲದ ಕೆರೆಗೆ ಬಂದರು ಮೂವರು ವಡ್ಡರು । ಇಬ್ಬರು ಕುಂಟರು ಒಬ್ಬಗೆ ಕಾಲೇ ಇಲ್ಲ ।
ಕಾಲಿಲ್ಲದ ವಡ್ಡಗೆ ಕೊಟ್ಟರು ಮೂರು ಎಮ್ಮೆಗಳ । ಎರಡು ಬರಡು ಒಂದಕೆ ಕರುವೇ ಇಲ್ಲ ॥ಮುಳ್ಳು॥
ಕರುವಿಲ್ಲದ ಎಮ್ಮೆಗೆ ಕೊಟ್ಟರು ಮೂರು ಹೊನ್ನುಗಳ । ಎರಡು ಸವಕಲು ಒಂದು ಸಲ್ಲಲೇ ಇಲ್ಲ ।
ಸಲ್ಲದಿದ್ದ ಹೊನ್ನಿಗೆ ಬಂದರು ಮೂವರು ನೋಟಗಾರರು । ಇಬ್ಬರು ಕುರುಡರು ಒಬ್ಬಗೆ ಕಣ್ಣೇ ಇಲ್ಲ ॥ಮುಳ್ಳು॥
ಕಣ್ಣಿಲ್ಲದ ನೋಟಗಾರಗೆ ಕೊಟ್ಟರು ಮೂರು ಊರುಗಳ । ಎರಡು ಹಾಳು ಒಂದಕೆ ಒಕ್ಕಲೇ ಇಲ್ಲ ।
ಒಕ್ಕಲಿಲ್ಲದ ಊರಿಗೆ ಬಂದರು ಮೂವರು ಕುಂಬಾರರು । ಇಬ್ಬರು ಚೊಂಚರು ಒಬ್ಬಗೆ ಕೈಯೇ ಇಲ್ಲ ॥ಮುಳ್ಳು॥
ಕೈಯಿಲ್ಲದ ಕುಂಬಾರನು ಮಾಡಿದ ಮೂರು ಮಡಕೆಗಳ । ಎರಡು ಒಡಕು ಒಂದಕೆ ಬುಡವೇ ಇಲ್ಲ ।
ಬುಡವಿಲ್ಲದ ಮಡಕೆಗೆ ಹಾಕಿದರ್ ಮೂರು ಅಕ್ಕಿಕಾಳ । ಎರಡು ಬೇಯದು ಒಂದು ಬೇಯಲೆ ಇಲ್ಲ ॥ಮುಳ್ಳು॥
ಬೇಯಲಿಲ್ಲದ ಅಕ್ಕಿಗೆ ಬಂದರು ಮೂವರು ನೆಂಟರು । ಇಬ್ಬರು ಉಣ್ಣರು ಒಬ್ಬಗೆ । ಹಸಿವೇ ಇಲ್ಲ ।
ಹಸಿವಿಲ್ಲದ ನೆಂಟಗೆ ಕೊಟ್ಟರು ಮೂರು ಟೊಣಪೆಗಳ । ಎರಡು ತಾಕದು ಒಂದು । ತಾಕಲೆ ಇಲ್ಲ ॥ಮುಳ್ಳು॥
ತಾಕಲಿಲ್ಲದ ಟೊಣಪೆಯ ।ತಾಕಿಸಿ ಸದ್ಗತಿಯನು । ಈಯಬೇಕು ಪುರಂದರ । ವಿಠಲರಾಯ ॥
ವಿಠಲ ವಿಠಲ ವಿಠಲ ಪುರಂದರ । ವಿಠಲ ವಿಠಲ ವಿಠಲ । ಪುರಂದರ ವಿಠಲ ವಿಠಲ ವಿಠಲ ।

------

ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ । ಎರಡು ತುಂಬದು ಒಂದು ತುಂಬಲೇ ಇಲ್ಲ ।
ತುಂಬಲಿಲ್ಲದ ಕೆರೆಗೆ ಬಂದರು ಮೂವರು ವಡ್ಡರು । ಇಬ್ಬರು ಕುಂಟರು ಒಬ್ಬಗೆ ಕಾಲೇ ಇಲ್ಲ ।

ಭಗವಂತ 84 ಲಕ್ಷ ಜೀವರಾಶಿಗಳನ್ನು ಸೃಷ್ಟಿ ಮಾಡಿದ್ದಾನೆ. ಆದರೆ ಅವನ ಪೂರ್ಣ ಕಲಾಕೃತಿ ಇರುವುದು ಮಾನವನಲ್ಲಿ. ವಿಶೇಷ ಬುದ್ಧಿ ಶಕ್ತಿ, ಉತ್ತಮ ಕರ್ಮ ಮಾಡುವ ಸಾಮರ್ಥ್ಯ, ಕರ್ತೃತ್ವಗಳು ಇರೋದು ಮಾನವನಿಗೆ. ಬಹು ಜನ್ಮದ ಪುಣ್ಯ ವಿಶೇಷದಿಂದ, ಸಂಸ್ಕಾರ ವಿಶೇಷದಿಂದ ಮನುಷ್ಯ ಜನ್ಮ ಬಂದಿದೆ. ಇದು ಭೋಗ ಶರೀರವಲ್ಲ, ಸಾಧನಾ ಶರೀರ.

ಮುಳ್ಳು ಕೊನೆ – ಇದರ ಮೇಲೆ ಮೂರು ಕೆರೆ ಕಟ್ಟಲು ಸಾಧ್ಯವಾ? ಮುಳ್ಳು ಕೊನೆ ಅಂದರೆ ಜೀವನ ಸ್ವರೂಪ, ಆ ಜೀವನ ಸ್ವರೂಪ ಅಂದರೆ ಸ್ವರೂಪ ದೇಹ, ಎಷ್ಟು ಇರುತ್ತೆ ಗಾತ್ರ, ಒಂದು ಕುದುರೆಯ ಬಾಲ ಅಂದರೆ ಉದ್ದನೆಯ ಬಾಲವನ್ನು ಹತ್ತು ಸಾವಿರದ ಒಂದನೇ ಭಾಗ ಮಾಡಿದರೆ ಎಷ್ಟು ಸೂಕ್ಷ್ಮ ಇರುತ್ತೋ, ಅದು ಕಾಣುವುದೇ ಇಲ್ಲ, ಒಂದು ಅಣು, ಆಟಮ್, ಅಷ್ಟು ಇರುತ್ತದೆ. ಸಣ್ಣ ಇರುವೆಗೆ ಸಣ್ಣ ಜೀವ, ದೊಡ್ಡ ಆನೆಗೆ ದೊಡ್ಡ ಜೀವಸ್ವರೂಪ ಅಂತ ಇರೊಲ್ಲ. ಎಲ್ಲ ಜೀವಿಗಳ ಗಾತ್ರವೂ ಒಂದೇ. ಇದನ್ನು ಮುಳ್ಳು ಕೊನೆ, ಅದರ ಮೇಲೆ ಲಿಂಗದೇಹ, ಅದರ ಮೇಲೆ ಅನಿರುದ್ಧ ದೇಹ, ಅದರ ಮೇಲೆ ನಮ್ಮ ಕಣ್ಣಿಗೆ ಕಾಣುವ ಈ ದೇಹ, ಸ್ಥೂಲ ದೇಹ. ಒಂದರೊಳಗೊಂದು, ಈ ದೇಹಕ್ಕೆ ಕೆರೆ ಅಂದರು. ಕೆರೆ ಅಂದರೆ ನೀರು ಶೇಖರಿಸುವ ಜಾಗ. ನೀರು ಅಂದರೆ ನಾವು ಕುಡಿಯುವ ನೀರಲ್ಲ. ನೀರು ಅನ್ನುವುದಕ್ಕೆ ಪರ್ಯಾಯ ವಾಚಕವಾಗಿ ಕರ್ಮ ಅಂತಾರೆ.ಆಪ: ಅಂದರೆ ನೀರು, ನೀರಿಗೆ ಕರ್ಮ ಎನ್ನುತ್ತಾರೆ.ಸ್ಥೂಲ ದೇಹದಿಂದ ಸತ್ಕರ್ಮ ಮಾಡಲು ಅವಕಾಶವಿತ್ತು. ಲಿಂಗ ದೇಹ, ಅನಿರುದ್ಧ ದೇಹದಿಂದ ಸಾಧ್ಯವಾಗೊಲ್ಲ. ಅವೆರಡು ತುಂಬಲಿಲ್ಲ, ಈ ಸ್ಥೂಲ ದೇಹದಿಂದ ಮಾಡಿದ ಕರ್ಮ ಮಾಡಲಿಲ್ಲವೇ ಅಂದರೆ ಸತ್ಕರ್ಮ ಮಾಡಲಿಲ್ಲ, ಮಾಡಬಾರದ್ದನ್ನು ಮಾಡಿದ. ಆದ್ದರಿಂದ, ಅವೆರಡು ತುಂಬಲಿಲ್ಲ, ಈ ಸ್ಥೂಲ ದೇಹವೂ ತುಂಬಲೇ ಇಲ್ಲ.

**ತುಂಬಲಿಲ್ಲದ ಕೆರೆಗೆ ಬಂದರು ಮೂವರು ವಡ್ಡರು । ಇಬ್ಬರು ಕುಂಟರು ಒಬ್ಬಗೆ ಕಾಲೇ ಇಲ್ಲ ।**

ಆ ಕೆರೆಯನ್ನು ಪುನರ್ ನಿರ್ಮಾಣ ಮಾಡಲು, ಮೂವರು ವಡ್ಡರು, ಅಂದರೆ ಕಠಿಣ ಕೆಲಸಗಳನ್ನು ಮಾಡುವವರು ಅಂದರೆ, ಬಾಲ್ಯ, ಯೌವನ, ವೃದ್ಧಾಪ್ಯ ಎಂಬ ಮೂರು ಅವಸ್ಥೆಗಳನ್ನು ನೀಡಿದ. ಬಾಲ್ಯದಲ್ಲಿ ನಾವು ಪೂರ್ಣವಾಗಿ ಭಕ್ತಿ, ಸಾಧನೆ ಮಾಡುವುದು ಕಷ್ಟ. ಇನ್ನು ವೃದ್ಧಾಪ್ಯದಲ್ಲಿ ದೇಹಕ್ಕೆ ಶಕ್ತಿ ಇರೊಲ್ಲ, ಕಣ್ಣು ಕಾಣೊಲ್ಲ, ಕಿವಿ ಕೇಳೊಲ್ಲ, ಸಾಧನೆ ಮಾಡಲು ಯೌವನದಲ್ಲಿ ಸಾಧ್ಯ. ಆದರೆ ಅವನು ಆ ಯೌವನದಲ್ಲಿ ಏನೂ ಧರ್ಮ ಮಾಡಲಿಲ್ಲ. ಅಂದರೆ ಬಾಲ್ಯ, ಯೌವನದಲ್ಲಿ ಸಂಪೂರ್ಣವಾಗಿ ಮಾಡಲಿಲ್ಲ, ಅಂದರೆ ಅವರಿಬ್ಬರು ಕುಂಟರು, ಇನ್ನು ಯೌವನದಲ್ಲಿ ಏನೂ ಪಾರಮಾರ್ಥ ಸಾಧನೆ ಮಾಡಲೇ ಇಲ್ಲ, ಅಂದರೆ ಕಾಲೇ ಇಲ್ಲ ಅಂತಾರೆ. ಇನ್ನೊಂದರ್ಥದಲ್ಲಿ ಕಾಲೇ ಇಲ್ಲ ಅಂದರೆ ಟೈಮೇ ಇಲ್ಲ. ಎಂದರ್ಥ.

**ಕಾಲಿಲ್ಲದ ವಡ್ಡಗೆ ಕೊಟ್ಟರು ಮೂರು ಎಮ್ಮೆಗಳ । ಎರಡು ಬರಡು ಒಂದಕೆ ಕರುವೇ ಇಲ್ಲ ।**

ಕಾಲಿಲ್ಲದ ವಡ್ಡಗೆ ಅಂದರೆ ಯೌವನಕ್ಕೆ, ಮೂರು ಎಮ್ಮೆಗಳನ್ನು ನೀಡಿದ. ಇದಕ್ಕೆ ಈಶಣತ್ರಯ ಅಂತಾರೆ.– ವಿತ್ತೈಷಣ (ಹಣ ಗಳಿಸುವ ಬಯಕೆ), ದಾರೈಶಣ–(ಮದುವೆಯಾಗುವ ಬಯಕೆ ಅಥವಾ ಹೆಂಡತಿಯ ಬಯಕೆ), ಪುತ್ರೈಶಣ (ಮಕ್ಕಳ ಬಯಕೆ). ಹೆಂಡತಿ ಮತ್ತು ಮಕ್ಕಳು ನಮ್ಮ ಮುಂದಿನ ದಾರಿಗೆ ಆಗುವುದಿಲ್ಲ. ಇನ್ನು ಮಧ್ಯದ್ದು ಹಣ. ಹಣಕ್ಕೆ ಸದ್ವಿನಿಯೋಗ ಮಾಡಿದರೆ ಜೀವನ ಧನ್ಯವಾಗುತ್ತದೆ. ಶ್ರೀ ಪುರಂದರ ದಾಸರು ತಮ್ಮ ನವ ಕೋಟಿ ಸಂಪತ್ತನ್ನೂ ತುಳಸೀದಳ ಇಟ್ಟು ಕೃಷ್ಣಾರ್ಪಣ ಅಂತ ದಾನ ಮಾಡಿ, ಬರಿಗೈಯಲ್ಲಿ ಬೀದಿಗಿಳಿದರಲ್ಲ. ತಾವು ಕೊಟ್ಟದ್ದನ್ನು ಮತ್ತೆ ಜ್ಞಾಪಿಸಿಕೊಳ್ಳಲೂ ಇಲ್ಲವಲ್ಲ. ಇನ್ನೆಂತಹ ಮಹಾನುಭಾವರು. ಆದ್ದರಿಂದ, ಹೆಂಡತಿ, ಮಕ್ಕಳು ಆಗುವುದಿಲ್ಲ. ಅವೆರಡೂ ಬರಡು. ಇನ್ನು ಸಂಪತ್ತು ಉಪಯೋಗಕ್ಕೆ ಬರಲಿಲ್ಲ ಅಂದರೆ ಅದಕ್ಕೆ ಕರುವೇ ಇಲ್ಲ.

**ಕರುವಿಲ್ಲದ ಎಮ್ಮೆಗೆ ಕೊಟ್ಟರು ಮೂರು ಹೊನ್ನುಗಳ । ಎರಡು ಸವಕಲು ಒಂದು ಸಲ್ಲಲೇ ಇಲ್ಲ ।**

ಕರುವಿಲ್ಲದ ಎಮ್ಮೆ ಅಂದರೆ ಹಣಕ್ಕೆ ಮೂರು ಹೊನ್ನುಗಳನ್ನು ಕೊಟ್ಟರು, ಅಂದರೆ ಹಣಕ್ಕೆ ಮೂರು ಮಾರ್ಗ. ದಾನ, ಭೋಗ, ನಾಶ (**ದಾನಂ ಭೋಗೋ ನಾಶಸ್ತಿಸ್ರೋರ್ಗತಯೋರ್ ಭವತಿ ವಿತ್ತಸ್ಯ, ಯೋ ನದದಾತಿ ನಭುಂಕ್ತೇ ತಸ್ಯ ತೃತೀಯಾ ಗತಿರ್ಭವತಿ**)ಅಂದರೆ ದಾನ ಮಾಡಬೇಕು ಅಥವಾ ತಾನು ತಿನ್ನಬೇಕು. ಎಷ್ಟು ತಿಂತಾರೆ? ಅವೆರಡೂ ಮಾಡಲಿಲ್ಲ ಅಂದರೆ ನಾಶ. ಈ ಮೂರೇ ಮಾರ್ಗ. ಇವನು ದಾನ ಮಾಡಲಿಲ್ಲ, ಸತ್ಕರ್ಮಾಚರಣೆಗೆ ವಿನಿಯೋಗ ಮಾಡಲಿಲ್ಲ, ತಾನೂ ತಿನ್ನಲಿಲ್ಲ (ಹರಿಕೊಟ್ಟ ಕಾಲಕ್ಕೆ ಉಣಲಿಲ್ಲ ಅಂತಾರೆ ದಾಸರು). ಅಂದರೆ ಮೂರು ಹೊನ್ನುಗಳಲ್ಲಿ ಎರಡು ಸವಕಲು, ಸತ್ಪಾತ್ರಕ್ಕೆ ಕೊಡಲಿಲ್ಲ, ತಾನೂ ತಿನ್ನಲಿಲ್ಲ, ಎರಡು ಸವಕಲು, ಇನ್ನೊಂದು ಸಲ್ಲಲೇ ಇಲ್ಲ. ಭೋಗ ಹಾಗೂ ನಾಶವಾದದ್ದು ಇವನಿಗೆ ಫಲ ಬರೊಲ್ಲ, ಪುಣ್ಯದ ರೂಪದಲ್ಲಿ ಒದಗೋದು ದಾನ. ದಾನ ಮಾಡದಿದ್ದ ಮೇಲೆ ವ್ಯರ್ಥ.

**ಸಲ್ಲದಿದ್ದ ಹೊನ್ನಿಗೆ ಬಂದರು ಮೂವರು ನೋಟಗಾರರು । ಇಬ್ಬರು ಕುರುಡರು ಒಬ್ಬಗೆ ಕಣ್ಣೇ ಇಲ್ಲ**

ಸಲ್ಲದಿದ್ದ ಹೊನ್ನು, ಅಂದರೆ ದಾನ ಮಾಡಿದಾಗ ಅಥವಾ ಮಾಡದೇ ಇದ್ದಾಗ, ಮೂರು ಕರ್ಮಗಳಾಗಿ ಅಂದರೆ (1)ಸಂಚಿತ ಕರ್ಮ ಎಂದರೆ ಹಿಂದಿನ ಎಲ್ಲಾ ಸಂಚಿತ ಕರ್ಮಗಳು ಮತ್ತು ಹಿಂದಿನ ಜನ್ಮಗಳು ಸಹ. – ಗಳಿಸಿದ್ದು, (2)ಪ್ರಾರಬ್ದ ಕರ್ಮ–ಪ್ರಾಚೀನ ಕರ್ಮ, ಪ್ರಾರಬ್ಧವು ಹಿಂದಿನ ಕರ್ಮದ ಒಂದು ಭಾಗವಾಗಿದ್ದು, ಅದು ಪ್ರಸ್ತುತ ಜನ್ಮಕ್ಕೆ ಅಂದರೆ ದೇಹಕ್ಕೆ ಕಾರಣವಾಗಿದೆ. ಆದ್ದರಿಂದ, ಪ್ರಾರಬ್ಧವು ಸಂಚಿತದ ಒಂದು ಭಾಗವಾಗಿದೆ. ಈ ಕರ್ಮವನ್ನು ತಪ್ಪಿಸಲು ಅಥವಾ ಬದಲಾಯಿಸಲು ಸಾಧ್ಯವಿಲ್ಲ. ಅದು ಅನುಭವಿಸುವುದರಿಂದ ಮಾತ್ರ ದಣಿದಿದೆ. ಸರಳವಾಗಿ ಹೇಳುವುದಾದರೆ ಇದು ನಮ್ಮ ಹಿಂದಿನ ಕರ್ಮಗಳಿಗೆ ಬೆಲೆ ಕೊಡುವುದು.(3)ಆಗಾಮಿ– ಅಂದರೆ ಈಗಿನ ಕರ್ಮ. ಅಂದರೆ ಈಗ ಮಾಡುತ್ತಿರುವ ಕರ್ಮ ಅಥವಾ ಕ್ರಿಯೆಗಳು. ಇದು ಈ ಜನ್ಮದಲ್ಲಿ ಮತ್ತು ಮುಂದಿನ ಜನ್ಮದಲ್ಲಿ ನಮ್ಮ ಭವಿಷ್ಯದ ಮೇಲೆ ಪರಿಣಾಮ ಬೀರುತ್ತದೆ. ಉದಾಹರಣೆಗೆ ಒಬ್ಬ ಬಿಲ್ಲುಗಾರ ಬಿಟ್ಟ ಬಾಣ ಅವನ ಕೈಯಿಂದ ಹೊರಟುಹೋಗಿದೆ. ಅವನಿಗೆ ಅದು ನೆನಪಿಗೆ ಬರುತ್ತಿಲ್ಲ, ಅವನು ಇನ್ನೊಂದು ಬಾಣವನ್ನು ಹೊಡೆಯಲಿದ್ದಾನೆ. ಅವನ ಬೆನ್ನಿನ ಬತ್ತಳಿಕೆಯಲ್ಲಿರುವ ಬಾಣಗಳ ಕಟ್ಟೇ ಸಂಚಿತ. ಅವನು ಪ್ರಯೋಗಿಸಿದ ಬಾಣ ಪ್ರಾರಬ್ಧ. ಅವನು ತನ್ನ ಬಿಲ್ಲಿನಿಂದ ಬಿಡಲಿರುವ ಬಾಣ ಆಗಾಮಿ. ಆದ್ದರಿಂದ, ಸಂಚಿತ, ಪ್ರಾರಬ್ಧ ಕರ್ಮ, ಇವೆರಡೂ ಕುರುಡರು, ಇನ್ನೊಂದು ಆಗಾಮಿ, ಅದಕ್ಕೆ ಕಣ್ಣೇ ಇಲ್ಲ.

**ಕಣ್ಣಿಲ್ಲದ ನೋಟಗಾರಗೆ ಕೊಟ್ಟರು ಮೂರು ಊರುಗಳ । ಎರಡು ಹಾಳು ಒಂದಕೆ ಒಕ್ಕಲೇ ಇಲ್ಲ ।**

ಈ ಕಣ್ಣಿಲ್ಲದ ನೋಟಗಾರಗೆ ಅಂದರೆ ಆಗಾಮಿ ಕರ್ಮ ನಿಮಿತ್ತದದಿಂದ, ಮೂರು ಊರುಗಳು ಅಂದರೆಸಾತ್ವಿಕ ಕರ್ಮ, ರಾಜಸ ಕರ್ಮ, ತಾಮಸ ಕರ್ಮಸತ್ವ ಗುಣ ಅಂದರೆ ಜ್ಞಾನಕ್ಕೆ ಸಂಬಂಧಿಸಿದ್ದು, ಇದು ಪ್ರಬಲವಾಗಿದ್ದಾಗ ದೇವರ ವಿಚಾರ ಕೇಳಬೇಕು, ತಿಳಿಯಬೇಕು, ಅಧ್ಯಯನ ಮಾಡಬೇಕು ಎಂಬ ಹಂಬಲ. ರಾಜಸ ಕರ್ಮ ಅಂದರೆ ವೃಥಾ ವ್ಯರ್ಥ ಕರ್ಮ ಮಾಡೋದು, ಕೆಲಸಕ್ಕೆ ಬಾರದ ವಿಷಯದಲ್ಲಿ ಮನಸು. ಸಂಸಾರದಲ್ಲೇ ಇರೋದು, ಪುಣ್ಯ ಇಲ್ಲ, ಪುರುಷಾರ್ಥ ಇಲ್ಲ. ಇನ್ನು ತಾಮಸ ಕರ್ಮ ಅಂದರೆ, ಅಜ್ಞಾನ ವಿಪರೀತ ಜ್ಞಾನಗಳ

ಸಂಪಾದನೆ ಮಾಡುತ್ತಾ ಅದರಲ್ಲೇ ಇರೋದು. ರಾಜಸ ಕರ್ಮ ಸಂಸಾರದಲ್ಲೇ ಇಡುತ್ತೆ. ತಾಮಸ ಕರ್ಮ ಪೂರ್ಣ ಅಧ:ಪತನಕ್ಕೆ ಎಳೆದುಕೊಂಡು ಹೋಗುತ್ತೆ. ಅವೆರಡೂ ಹಾಳು, ಇನ್ನು ಸಾತ್ವಿಕ ಕರ್ಮ – ಅದನ್ನು ಉತ್ತು ಬಿತ್ತು ಬೇಸಾಯ ಮಾಡೋ ವ್ಯಕ್ತಿನೇ ಇಲ್ಲ. ಸಾತ್ವಿಕ ಗುಣ ಬಳಸಿಕೊಳ್ತನೇ ಇಲ್ಲ. ಒಕ್ಕಲು ಇದ್ದಿದ್ರೆ ಏನಾದ್ರೂ ಬೆಳೆಯಬಹುದಾಗಿತ್ತು. ಒಕ್ಕಲೇ ಇಲ್ಲ.

**ಒಕ್ಕಲಿಲ್ಲದ ಊರಿಗೆ ಬಂದರು ಮೂವರು ಕುಂಬಾರರು । ಇಬ್ಬರು ಚೊಂಚರು ಒಬ್ಬಗೆ ಕೈಯೇ ಇಲ್ಲ**

ಒಕ್ಕಲಿಲ್ಲದ ಊರಿಗೆ ಅಂದರೆ ಸಾತ್ವಿಕ ಕರ್ಮ ಎಂಬ ಊರಿಗೆ ಬಂದರು ಮೂವರು ಕುಂಬಾರರು ಅಂದರೆ ಕುಂಭಕಾರರು, ಶಿಲ್ಪಿಗಳು, ಬ್ರಹಾಂಡವೆಂಬ ಘಟವನ್ನು ನಿರ್ಮಾಣ ಮಾಡುವಂತಹ ಹರಿ ಹರ ಬ್ರಹ್ಮ ಮೂವರು ಬಂದರು. ಇಬ್ಬರು ಚೊಂಚರು ಅಂದರೆ ಅವರ ಕೈ ಚಿಕ್ಕದು. ಸ್ವತಂತ್ರವಾಗಿ ಮಾಡುವ ಅಧಿಕಾರವಿಲ್ಲ ಅವರಿಗೆ. ಅಂದರೆ ಶಿವ ಮತ್ತು ಬ್ರಹ್ಮ ಇವರು ಚೊಂಚರು. ಒಬ್ಬಗೆ ಕೈಯೇ ಇಲ್ಲ. ಅಂದರೆ ಹರಿಗೆ ನಮ್ಮ ತನಕ ಕೈಚಾಚಿ ಕರೆಯುವ ಕೈ ಇಲ್ಲ. ದೇವರು ನಮ್ಮನ್ನು ನಮ್ಮವರು ಅಂತ ಕೈ ಬೀಸಿ ಕರೆಯುವ ಯಾವ ಸಾತ್ವಿಕ ಕರ್ಮವನ್ನು ನಾವು ಮಾಡಿಲ್ಲ.

**ಕೈಯಿಲ್ಲದ ಕುಂಬಾರನು ಮಾಡಿದ ಮೂರು ಮಡಕೆಗಳ । ಎರಡು ಒಡಕು ಒಂದಕೆ ಬುಡವೇ ಇಲ್ಲ ।**

ನಮ್ಮ ಹತ್ತಿರ ಚಾಚುವ ಕೈ ಇಲ್ಲದ ಕುಂಬಾರನು ಜ್ಞಾನ, ಭಕ್ತಿ, ವೈರಾಗ್ಯ ಎಂಬ ಮೂರು ಮಡಿಕೆಗಳನ್ನು ಮಾಡಿದ. ಎರಡು ಒಡಕು, ಇನ್ನೊಂದಕ್ಕೆ ಬುಡವೇ ಇಲ್ಲ. ಅಂದರೆ ಜ್ಞಾನ ಇಲ್ಲ, ವೈರಾಗ್ಯ ಇಲ್ಲ, ಕಾರಣ ಭಕ್ತಿಯೇ ಇಲ್ಲ. ಜ್ಞಾನ, ವೈರಾಗ್ಯ ಇದು ಒಡಕು, ಇನ್ನೊಂದಕ್ಕೆ ಬುಡವಿಲ್ಲ, ಭಕ್ತಿ ಮಾಡಲೇ ಇಲ್ಲ. ನಮ್ಮದು ಭಕ್ತಿ ಇಲ್ಲಾ ಅಂತ ಅಲ್ಲ, ಇದೆ, ಭಕ್ತಿ ಎಲ್ಲಿ ಇದೆ ಅಂದರೆ ಹೆಂಡತಿ ಮಕ್ಕಳಲ್ಲಿ ಭಕ್ತಿ, ಭಗವಂತನಲ್ಲಿ ವಿರಕ್ತಿ. ಈ ಅವಸ್ಥೆ ನಮ್ಮದು.

**ಬುಡವಿಲ್ಲದ ಮಡಕೆಗೆ ಹಾಕಿದರ್ ಮೂರು ಅಕ್ಕಿಕಾಳ । ಎರಡು ಬೇಯದು ಒಂದು ಬೇಯಲೆ ಇಲ್ಲ**

ಬುಡವಿಲ್ಲದ ಮಡಕೆಗೆ ಅಂದರೆ ಭಕ್ತಿಗೆ ಮೂರು ಅಕ್ಕಿ ಕಾಳು ಹಾಕಿದರು, ಅನ್ನ ಮಾಡೋಣ ಅಂತ. ಸಾತ್ವಿಕ ಭಕ್ತಿ, ರಾಜಸ ಭಕ್ತಿ, ತಾಮಸ ಭಕ್ತಿ. ರಾಜಸ, ತಾಮಸ ಭಕ್ತಿ ಉಪಯೋಗವಿಲ್ಲ, ತಾಮಸ ಭಕ್ತಿ ವಿಚಿತ್ರವಾದದ್ದು. ಅನುಪಯೋಗ, ರಾಜಸ ಭಕ್ತಿ ಅಂದರೆ ಸಂಸಾರದಲ್ಲೇ ಇರೋದು. ಸಾತ್ವಿಕ ಭಕ್ತಿ ಮಾಡಲೇ ಇಲ್ಲ. ಅಂದರೆ ರಾಜಸ, ತಾಮಸ ಇದು ಬೇಯದು, ಸಾತ್ವಿಕ ಭಕ್ತಿ ಬೇಯಲೇ ಇಲ್ಲ, ಅಕ್ಕಿ ಅಕ್ಕಿಯಾಗೇ ಉಳಿಯಿತು. ಅಂದರೆ ಸಾತ್ವಿಕ ಭಕ್ತಿ ಮಾಡಲೇ ಇಲ್ಲ.

**ಬೇಯಲಿಲ್ಲದ ಅಕ್ಕಿಗೆ  ಬಂದರು ಮೂವರು ನೆಂಟರು । ಇಬ್ಬರು ಉಣ್ಣರು ಒಬ್ಬಗೆ । ಹಸಿವೇ ಇಲ್ಲ ।**

ಸಾತ್ವಿಕ ಭಕ್ತಿಗೆ ಮೂವರು ನೆಂಟರು ಬಂದರು,  ಜೀವ, ತತ್ವಾಭಿಮಾನಿ ಅಸುರರು, ತತ್ವಾಭಿಮಾನಿ ದೇವತೆಗಳು.  ಇವರಲ್ಲಿ ಇಬ್ಬರು ಅಂದರೆ ತತ್ವಾಭಿಮಾನಿ ಅಸುರರು, ತತ್ವಾಭಿಮಾನಿ ದೇವತೆಗಳು, ಇವರಿಬ್ಬರು ಉಣ್ಣರು, ಇನ್ನೊಬ್ಬಗೆ ಹಸಿವಿಲ್ಲ.  ತತ್ವಾಭಿಮಾನಿ ಅಸುರರು ನಮ್ಮಿಂದ ಕೆಟ್ಟ ಕೆಲಸ ಮಾಡಿಸಲು ಕಾಯುತ್ತಿರುತ್ತಾರೆ. ಅವರಿಗೂ ತತ್ವಾಭಿಮಾನಿ ದೇವತೆಗಳಿಗೂ ಸ್ಪರ್ಧೆ.  ಆದ್ದರಿಂದ, ಸಾತ್ವಿಕ ಕರ್ಮ ಮಾಡಲೇ ಇಲ್ಲ, ಅಂದರೆ ನಾನು ಸತ್ಕರ್ಮ ಮಾಡಬೇಕು, ಉದ್ಧಾರ ಆಗಬೇಕು ಅನ್ನುವ ಮನಸ್ಸೇ ಇಲ್ಲ.  ಆದ್ದರಿಂದ, ಅವರಿಬ್ಬರು ಉಣ್ಣರು,  ಇನ್ನು ಉಳಿದಿರುವುದು ಸತ್ಕರ್ಮ ಮಾಡಬಹುದಾದ ಜೀವ, ಅದಕ್ಕೆ ಹಸಿವೇ ಇಲ್ಲ.

**ಹಸಿವಿಲ್ಲದ ನೆಂಟಗೆ  ಕೊಟ್ಟರು ಮೂರು ಟೊಣಪೆಗಳ । ಎರಡು ತಾಕದು ಒಂದು । ತಾಕಲೆ ಇಲ್ಲ**

ಹಸಿವಿಲ್ಲದ ನೆಂಟ ಅಂದರೆ ಜೀವ, ಅದಕ್ಕೆ ಮೂರು ಏಟುಗಳನ್ನು ಕೊಟ್ಟ, ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕ.  ಆದಿ ದೈವಿಕ ಅಂದರೆ ದೈವದಿಂದ ಬರುವುದು, ಬಿರುಗಾಳಿ, ಸುನಾಮಿ, ಅತಿವೃಷ್ಠಿ, ಅನಾವೃಷ್ಟಿ, ಇತ್ಯಾದಿ. ಇವನು ಸ್ವಲ್ಪವಾದರೂ ಎಚ್ಚೆತ್ತುಕೊಳ್ಳಲಿ ಅಂತ.  ಇನ್ನು ಆದಿಭೌತಿಕ, ಪ್ರಾಣಿಗಳು, ಭೂತಗಳಿಂದ ಆದದ್ದು,  ರೋಗ ರುಜಿನ, ಈ ಎರಡನ್ನು ಬಗೆಹರಿಸಿಕೊಳ್ತಾರೆ.  ಮೂರನೆಯದು ಆಧ್ಯಾತ್ಮಿಕ ಅಂದರೆ ಮನಸ್ಸಿನ ತಾಪ,  ಇದನ್ನು ಯಾರ ಹತ್ತಿರ ಹೇಳಿಕೊಳ್ಳೋದು,ಈಗಲಾದರೂ ವೈದ್ಯೋ ನಾರಾಯಣೋ ಹರಿ: ಅಂತ ನಿನ್ನ ಸ್ಮರಣೆ ಕೊಡು ಅಂತ ಸ್ಮರಣೆ ಮಾಡಲಿಲ್ಲ.  ಅವೆರಡೂ ತಾಕಲಿಲ್ಲ.  ಇನ್ನು ಆಧ್ಯಾತ್ಮಿಕ ಅದು ತಾಕಲೇ ಇಲ್ಲ.

**ತಾಕಲಿಲ್ಲದ ಟೊಣಪೆಯ ।ತಾಕಿಸಿ ಸದ್ಗತಿಯನು । ಈಯಬೇಕು ಪುರಂದರ । ವಿಠಲರಾಯ ॥**

ತಾಕಲಿಲ್ಲದ ಟೊಣಪೆಯ ಅಂದರೆ ಆಧ್ಯಾತ್ಮಿಕ ಭಕ್ತಿ ನನಗೆ ಕೊಡು,  ಇನ್ನಾದರೂ ನನ್ನನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿ,  ಸತ್ಕರ್ಮ ಮಾಡುವಂತೆ ಪ್ರೇರೇಪಣೆ ಕೊಡು, ನಿನ್ನ ಸೇವಾ ಭಾಗ್ಯವನ್ನು ಕೊಡು. ಶ್ರೇಷ್ಠವಾದ ಈ ಮಾನವ ಜನ್ಮದಲ್ಲಿ ಜನಿಸಿದ್ದಕ್ಕೆ ನಿನ್ನ ಚಿಂತನೆಯನ್ನು ಮಾಡುವಂತೆ,  ನಿನ್ನನ್ನು ಸದಾ ನೆನೆಯುವಂತೆ ಮಾಡಿ ಈ ಜನ್ಮವನ್ನು ಉದ್ಧಾರ ಮಾಡು, ಸದ್ಗತಿಯನ್ನು ನೀಡು, ಈ ಜನ್ಮವನ್ನು ಸಾರ್ಥಕಗೊಳಿಸು ಎಂದು ಶ್ರೀ ಪುರಂದರ ವಿಠಲರಾಯ ಎಂದು ಶ್ರೀ ಪುರಂದರ ದಾಸರು ಅದ್ಭುತವಾಗಿ ಬಣ್ಣಿಸಿದ್ದಾರೆ.

**॥ ದಾಸ ಶ್ರೇಷ್ಠ ಕರ್ನಾಟಕ ಸಂಗೀತ ಪಿತಾಮಹ ಶ್ರೀ ಪುರಂದರದಾಸ ಗುರುಸಾರ್ವಭೌಮಕೀ ಜೈ ॥**

******